ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ವಂಗಳವಾರ, ದಿನಾಂಕ ೨೪ನೇ ಮೇ ೧೯೮೮, ಜ್ಯೇಷ್ಠ ೩, ೧೯೧೦, ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ

೧೧ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಆರ್. ಗೊಲ್ಲಹಳ್ಳಿಯಲ್ಲಿ ನ್ಯಾಯಬೆಲೆ ಅಂಗಡಿ

೧೭೨೮. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ಮಿಡಿಗೇಶಿ ಮಂಡಳಿಗೆ ಸೇರಿದ ರೆಡ್ಡಿಹಳ್ಳಿ ಗ್ರಾಮಕ್ಕೆ ಆರ್. ಗೊಲ್ಲಹಳ್ಳಿ, ಗೊಲ್ಲರಹಟ್ಟಿ ಕಟ್ಟಿದಾಸಪ್ಪನ ಪಾಳ್ಯಗಳು ಎಷ್ಟು ಕಿ.ಮೀ. ದೂರದಲ್ಲಿವೆ ಸರ್ಕಾರದ ವತಿಯಿಂದ ಕೊಡುವ ಆಹಾರ ಸಾಮಗ್ರಿಗಳನ್ನು ನ್ಯಾಯ ಬೆಲೆ ಅಂಗಡಿಗಳಲ್ಲಿ ಪಡೆಯಲು ಸದರೀ ಗ್ರಾಮಗಳ ಜನತೆಗೆ ತೊಂದರೆಯಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಆರ್. ಗೊಲ್ಲಹಳ್ಳಿಯಲ್ಲಿ ನ್ಯಾಯ ಬೆಲೆ ಅಂಗಡಿಯನ್ನು ತೆಗೆಯಲು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಸದರಿ ಸ್ಥಳದಲ್ಲಿ ನ್ಯಾಯಬೆಲೆ ಅಂಗಡಿ ತೆರೆಯಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಸವರಾಜ್‌ಪಾಟೀಲ್ ಅನ್ವರಿ (ಆಹಾರ ಮಂತ್ರಿ ನಾಗರೀಕ ಸರಬರಾಜು ರಾಜ್ಯ ಮಂತ್ರಿಗಳು).—

ಅ) ಕ್ರಮವಾಗಿ ೨ ಕಿ. ಮೀ. ೧ ಕಿ.ಮೀ. ಮತ್ತು ೨½ ಕಿ.ಮೀ. ದೂರದಲ್ಲಿವೆ. ಬಂದಿಲ್ಲ.

ಆ) ಜಿಲ್ಲಾ ಪರಿಷತ್ತಿಗೆ ಮನವಿ ಬಂದಿದೆ. ಅರ್ಜಿಯನ್ನು ತಿರಸ್ಕರಿಸಿದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ಮೊದಲನೇ ಪ್ರಶ್ನೆಯಲ್ಲಿ ನಮೂದಿಸಿರುವ ಎಷ್ಟು ಹಳ್ಳಿಗಳಲ್ಲಿ ನ್ಯಾಯ ಬೆಲೆ ಅಂಗಡಿಗಳು ಇವೆ, ಮತ್ತು ಹಾಗೆ ಇರುವ ಹಳ್ಳಿಯಿಂದ ಆ ವ್ಯಾಪ್ತಿಯ ಕೊನೆಯ ಹಳ್ಳಿಗೆ ಇರುವ ಅಂತರ ಏನು ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಹಾಲಿ ರೆಡ್ಡಿಹಳ್ಳಿಯಲ್ಲಿ ನ್ಯಾಯಬೆಲೆ ಅಂಗಡಿ ಇದೆ. ರೆಡ್ಡಿಹಳ್ಳಿ ಮತ್ತು ಕಟ್ಟಿದಾಸಪ್ಪನ ಪಾಳ್ಯಗಳು ೨ ಕಿ.ಮೀ. ಅಂತರದಲ್ಲಿದ್ದು ಕಟ್ಟಿದಾಸಪ್ಪನಪಾಳ್ಯದಿಂದ ಗೊಲ್ಲರಹಳ್ಳಿಗೆ ೧ ಕಿ ಮೀ. ಅಂತರ ಇದ್ದು ಅಲ್ಲಿಂದ ಆರ್ ಗೊಲ್ಲರಹಳ್ಳಿಗೆ ೨ ಕಿ.ಮೀ. ಅಂತರ ಇದೆ. ಹೀಗೆ ಒಟ್ಟು ೬ ಹಳ್ಳಿಗಳ ಮಧ್ಯೆ ಅಂಗಡಿ ಇದೆ.ಅಲ್ಲಿನ ಕಾರ್ಡುಗಳ ವಿವರಗಳೆಂದರೆ ರೆಡ್ಡಿಹಳ್ಳಿಯಲ್ಲಿ ೧೨೦ ಹಸಿರು ಕಾರ್ಡ್‌ಗಳು ೮೮ ಕೇಸರಿ ಕಾರ್ಡ್‌ಗಳು ಗೊಲ್ಲರಹಟ್ಟಿಯಲ್ಲಿ ೭೫ ಹಸಿರು ಕಾರ್ಡ್‌ದ್ದರೆ ೮೦ ಕೇಸರಿ

ಕಾರ್ಡಿವೆ. ದಾಸಪ್ಪನಪಾಳ್ಯದಲ್ಲಿ ೮ ಹಸಿರು ಕಾರ್ಡು ಮತ್ತು ೧೨ ಕೇಸರಿ ಕಾರ್ಡು ಆರ್ ಗೊಲ್ಲರಹಳ್ಳಿಯಲ್ಲಿ ೧೯ ಹಸಿರು ಕಾರ್ಡು ಮತ್ತು ೭೦ ಕೇಸರಿ ಕಾರ್ಡು, ಕಟ್ಟಿದಾಸಪ್ಪನಪಾಳ್ಯದಲ್ಲಿ ೨೦ ಹಸಿರು ಕಾರ್ಡು ಮತ್ತು ೧೦ ಕೇಸರಿ ಕಾರ್ಡು ಹಾಗೆಯೇ ಕಟ್ಟಿದಾಸಪ್ಪನ ಗೊಲ್ಲರಹಟ್ಟಿಯಲ್ಲಿ ೬ ಹಸಿರುಕಾರ್ಡು ಮತ್ತು ೫ ಕೇಸರಿ ಕಾರ್ಡುಗಳಿವೆ. ಎಲ್ಲಾ ಸೇರಿ ಒಟ್ಟಿನಲ್ಲಿ ೫೬ ಆಗುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಕಟ್ಟಿ ದಾಸಪ್ಪನಪಾಳ್ಯ ಸುಮಾರು ೪ ಕಿಲೋ ಮೀಟರ ಮೇಲೆ ಆಗುತ್ತದೆ. ರೆಡ್ಡಿ ಹಳ್ಳಿಯಿಂದ ಅಲ್ಲಿ ಬಂದು ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವುದಕ್ಕೆ ತೊಂದರೆಯಾಗುತ್ತದೆ. ಅಲ್ಲಿ ನ್ಯಾಯ ಬೆಲೆ ಅಂಗಡಿಯನ್ನು ಮಂಜೂರು ಮಾಡಿಕೊಡಬೇಕ ಎಂದು ಅವರು ಅರ್ಜಿ ಸಲ್ಲಿಸಿದ್ದಾರೆ ಅದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಯಾವಾಗ ಮಂಜೂರು ಮಾಡುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಏಪ್ರಿಲ್ ಒಂದರಿಂದ ಗ್ರಾಮಾಂತರ ಪ್ರದೇಶಕ್ಕೆ ಆಹಾರ ಸಾಮಗ್ರಿಗಳನ್ನು ನೀಡುವ ನ್ಯಾಯ ಬೆಲೆ ಅಂಗಡಿಗಳು ಏನು ಇವೆ ಇವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ. ಈ ಅಂಗಡಿಗಳ ಅವಶ್ಯಕತೆ ಎಲ್ಲಿ ಇದೆ ಎಂಬ ನಿರ್ಣಯವನ್ನು ಅವರು ತೆಗೆದುಕೊಳ್ಳುತ್ತಾರೆ. ಇದನ್ನು ಜಿಲ್ಲಾ ಪರಿಷತ್ತಿನವರ ಗಮನಕ್ಕೆ ತಂದರೆ ಅವರು ಮಾಡಿಕೊಡಬಹುದು.

ಶ್ರೀ ಜಿ. ಎಸ್. ಶಿವನಂಜಪ್ಪ.—ಜಿಲ್ಲಾ ಪರಿಷತ್ತಿಗೆ ಮನವಿ ಬಂದಿದೆ. ಅದನ್ನು ತಿರಸ್ಕರಿಸಿದೆ ಎಂದು ಎರಡನೇ ಪ್ರಶ್ನೆಗೆ ಉತ್ತರವಾಗಿ ಹೇಳಿದ್ದಾರೆ, ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಸ್ವತಃ ತಾವೇ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಅಧಿಕಾರವಿಲ್ಲ ವೆಂದು ತೀರ್ಮಾನ ಮಾಡಿದ್ದಾರೆ. ಇದಾದ ಮೇಲೆ ಈ ಅರ್ಜಿಯನ್ನು ಅವರು ತೀರ್ಮಾನ ಮಾಡಿಲ್ಲ. ಇದನ್ನು ತಾಲ್ಲೂಕು ಮಂಡಲಿಗೆ ಕಳಿಸಿ ಅಲ್ಲಿಂದ ಠರಾವಾಗಿ ಬರಬೇಕು. ಅಲ್ಲಿಂದ ಬರಲಿಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಸದಸ್ಯರು ಹೇಳತಕ್ಕಂಥ ಸಮಸ್ಯೆಗಳು ಬಹಳಷ್ಟು ಕಡೆಗಳಲ್ಲಿ ಬಂದಿದೆ. ಜಿಲ್ಲಾ ಪರಿಷತ್ತಿನ ಅಧ್ಯಕ್ಷರು, ಮುಖ್ಯ ಕಾರ್ಯದರ್ಶಿಗಳು ಸೇರಿ ಎಲ್ಲೆ ಗ್ರಾಮದಿಂದ ಗ್ರಾಮಕ್ಕೆ ಬಹಳ ದೂರವೆಂದು ಎನಿಸಂತ್ತದೆ ಆಲ್ಲಿ ದುಸ್ಥಿತಿಯಾದರೆ ನಿಯಮವನ್ನು ಸಡಿಲಗೊಳಿಸ ಬಹುದೆಂದು ಸರಕಾರ ಸುತ್ತೋಲೆಯನ್ನು ಕಳಿಸಿದೆ. ಪುನಃ ಸದಸ್ಯರು ಇದನ್ನು ಒತ್ತಾಯಿಸಬೇಕೆಂದು ವಿನಂತಿ ಮಾಡುತ್ತೇನೆ.

ಬಸ್ ನಿಲ್ದಾಣಗಳಲ್ಲಿ ಕುಡಿಯಲಿಂವ ನೀರಿನ ವ್ಯವಸ್ಥೆ

೧೬೦೭. ಶ್ರೀ ಬಾಬುರೆಡ್ಡಿ ವಿ. ತುಂಗಳ್, (ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಜಾಪುರ ವಿಭಾಗದಲ್ಲಿ ಕರ್ನಾಟಕ ರಾಜ್ಯರಸ್ತೆ ಸಾರಿಗೆ ಒಡೆತನದಲ್ಲಿರುವ ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು ? (ವಿವರ ಒದಗಿಸುವುದು).

ಆ) ಇವುಗಳಲ್ಲಿ ಎಷ್ಟು ನಿಲ್ದಾಣಗಳ ಆವರಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ ? ಈ ರೀತಿ ವ್ಯವಸ್ಥೆಯಿಲ್ಲದ ನಿಲ್ದಾಣಗಳು ಯಾವುವು ?

ಇ) ಈ ವಿಭಾಗದಲ್ಲಿ ಡಾಂಬರಿನ ಆವರಣ ಹೊಂದಿರುವ ನಿಲ್ದಾಣಗಳ ಸಂಖ್ಯೆ ಎಷ್ಟು? ಹಾಗೂ ಡಾಂಬರೀಕರಣವಾಗದೇ ಉಳಿದಿರುವ ನಿಲ್ದಾಣಗಳ ಹೆಸರುಗಳೇನು ?

ಈ) ದೂರವಾಣಿ ಸಂಪರ್ಕವಿರದೆ ನಿಲ್ದಾಣದ ಹೆಸರುಗಳು ಏನು ? ದೂರವಾಣಿ ಒದಗಿಸದೆ ಯಿರಲು ಕಾರಣಗಳೇನು ?

ಉ) ಈ ವರ್ಷ ಎಷ್ಟು ನಿಲ್ದಾಣಗಳ ಆವರಣಗಳನ್ನು ಡಾಂಬರೀಕರಣ ಮಾಡಲು ಕ್ರಮ ಕೈಗೊಳ್ಳಲಾಗುವುದು ?